ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1252
ಸದಸ್ಯರ ಹೆಸರು	ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	22.09.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಹೊಸದಾಗಿ ರಚನೆಯಾಗಿರುವ ತಾಲ್ಲೂಕುಗಳು ಯಾವುವು; ಅವುಗಳ ರಚನೆಯನ್ನು ಯಾವಾಗ ಘೋಷಣೆ ಮಾಡಲಾಯಿತು; ನೂತನ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳ ಹಸ್ತಾಂತರ ಆಗಿದೆಯೇ;	ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಹೊಸದಾಗಿ ರಚನೆಯಾಗಿರುವ ತಾಲ್ಲೂಕುಗಳ ವಿವರ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ ನೋಡಿ)

ಕ್ರ. ಸಂ	ಜಿಲ್ಲೆ	ಹೊಸದಾಗಿ ರಚನೆಯಾಗಿರುವ ತಾಲ್ಲೂಕುಗಳು	ಅಸ್ತಿತ್ವಕ್ಕೆ ಬಂದಿರುವ ದಿನಾಂಕ
1.	ಮೈಸೂರು	1) ಸರಗೂರು 2) ಸಾಲಿಗ್ರಾಮ	1) 22-01-2018 2) 31-12-2020
2.	ಚಾಮರಾಜನಗರ	1) ಹನೂರು	1) 18-01-2018

ಹನೂರು ತಾಲ್ಲೂಕಿಗೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿ ವರ್ಗದವರ ಸೇವಾವಹಿ ಹಾಗೂ ಇನ್ನಿತರೆ ದಾಖಲೆಗಳು ಹಾಗೂ ಅಭಿಲೇಖಾಲಯಕ್ಕೆ ಸಂಬಂಧಿಸಿದ ಕಡತಗಳನ್ನು ಕೊಳ್ಳೇಗಾಲ ತಾಲ್ಲೂಕು ಕಚೇರಿಯಿಂದ ಹಸ್ತಾಂತರಿಸಲಾಗಿದೆ. ಸರಗೂರು ತಾಲ್ಲೂಕಿಗೆ ಹೆಚ್.ಡಿ.ಕೋಟೆ ತಾಲ್ಲೂಕಿನಿಂದ ಹಾಗೂ ಸಾಲಿಗ್ರಾಮ ತಾಲ್ಲೂಕಿಗೆ ಕೆ.ಆರ್.ನಗರ ತಾಲ್ಲೂಕಿನಿಂದ ದಾಖಲೆಗಳು ಹಸ್ತಾಂತರವಾಗಲು ಬಾಕಿ ಇರುತ್ತದೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	ಹೊಸ ತಾಲ್ಲೂಕು ಕಛೇರಿಗಳಿಗೆ ಸಿಬ್ಬಂದಿ ಸೇರಿದಂತೆ ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸಲಾಗಿದೆಯೇ; ಸದರಿ ಕಛೇರಿಗಳಿಗೆ ಮಂಜೂರಾಗಿರುವ ಸಿಬ್ಬಂದಿ ಸಂಖ್ಯೆ ಎಷ್ಟು; ಭರ್ತಿಯಾಗಿರುವ ಸಿಬ್ಬಂದಿ ಎಷ್ಟು; ಸಿಬ್ಬಂದಿ ಕೊರತೆ ಇರುವುದು ಕಂಡುಬಂದಿದೆಯೇ; ಸಿಬ್ಬಂದಿಯನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ;	ನೂತನ ಸರಗೂರು ಮತ್ತು ಹನೂರು ತಾಲ್ಲೂಕಿಗೆ ಮಂಜೂರಾಗಿರುವ / ಭರ್ತಿಯಾಗಿರುವ ಹುದ್ದೆಗಳ ವಿವರ ಕೆಳಕಂಡಂತಿದೆ.

ಹನೂರು ತಾಲ್ಲೂಕು:

ಕ್ರ. ಸಂ.	ಹುದ್ದೆಯ ಹೆಸರು	ಮಂಜೂರು	ಭರ್ತಿ	ಖಾಲಿ
1	ತಹಸೀಲ್ದಾರ್ ಗ್ರೇಡ್-1	01	01	-
2	ತಹಸೀಲ್ದಾರ್ ಗ್ರೇಡ್-2	01	01	-
3	ಶಿರಸ್ತೇದಾರ್	03	03	-
4	ಉಪ ತಹಸೀಲ್ದಾರ್	02	01	01
5	ರಾಜಸ್ವ ನಿರೀಕ್ಷಕರು	03	02	01
6	ಪ್ರಥಮ ದರ್ಜೆ ಸಹಾಯಕರು	03	02	01
7	ದ್ವಿತೀಯ ದರ್ಜೆ ಸಹಾಯಕರು	04	02	02
	ಹೊರಗುತ್ತಿಗೆ ಆಧಾರದಲ್ಲಿ			
8	ಬೆರಳಚ್ಚುಗಾರ/ ಡಾಟಾ ಎಂಟ್ರಿ ಆಪರೇಟರ್	01	01	-
9	ವಾಹನ ಚಾಲಕ	01	01	-
10	ಗ್ರೂಪ್ ಡಿ ನೌಕರ	03	-	03

ಸರಗೂರು ತಾಲ್ಲೂಕು:

ಕ್ರ. ಸಂ.	ಹುದ್ದೆಯ ಹೆಸರು	ಮಂಜೂರು	ಭರ್ತಿ	ಖಾಲಿ
1	ತಹಸೀಲ್ದಾರ್ ಗ್ರೇಡ್-1	01	01	-
2	ತಹಸೀಲ್ದಾರ್ ಗ್ರೇಡ್-2	01	-	01
3	ಶಿರಸ್ತೇದಾರ್	02	02	-
4	ಪ್ರಥಮ ದರ್ಜೆ ಸಹಾಯಕ	03	02	01
5	ಆಹಾರ ನಿರೀಕ್ಷಕರು	01	-	01
6	ದ್ವಿತೀಯ ದರ್ಜೆ ಸಹಾಯಕರು	04	02	02
	ಹೊರಗುತ್ತಿಗೆ ಆಧಾರದಲ್ಲಿ			
7	ಬೆರಳಚ್ಚುಗಾರ / ಡಾಟಾ ಎಂಟ್ರಿ ಆಪರೇಟರ್	01	-	01
8	ಗ್ರೂಪ್ ಡಿ ನೌಕರ	03	-	03
9	ವಾಹನ ಚಾಲಕ	01	-	01

ಇತ್ತೀಚೆಗೆ ರಚನೆಯಾಗಿರುವ ಸಾಲಿಗ್ರಾಮ ತಾಲ್ಲೂಕಿಗೆ ಹುದ್ದೆಗಳನ್ನು ಸೃಜಿಸುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಆರ್ಥಿಕ ಇಲಾಖೆಯ ಸಹಮತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಹೊಸ ತಾಲ್ಲೂಕುಗಳಲ್ಲಿ ಮಂಜೂರಾಗಿರುವ ಹುದ್ದೆಗಳ ಪೈಕಿ ಖಾಲಿ ಹುದ್ದೆಗಳನ್ನು ನೇಮಕಾತಿ / ಮುಂಬಡ್ತಿ / ವರ್ಗಾವಣೆ ಸಂದರ್ಭದಲ್ಲಿ ನಿಯಮಾನುಸಾರ ಭರ್ತಿ ಮಾಡಲಾಗುವುದು.

ಮುಂದುವರಿದು, ನೂತನವಾಗಿ ರಚನೆಯಾಗಿರುವ ತಾಲ್ಲೂಕುಗಳು ಕಾರ್ಯಾರಂಭ ಮಾಡಲು ಮತ್ತು ಆಡಳಿತಾತ್ಮಕ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕಂದಾಯ ಇಲಾಖೆಯಿಂದ ಹನೂರು ಮತ್ತು ಸರಗೂರು ತಾಲ್ಲೂಕಿಗೆ ಬಿಡುಗಡೆ ಮಾಡಿದ ಅನುದಾನದ ವಿವರ ಕೆಳಕಂಡಂತಿದೆ.

ವರ್ಷ	**ಬಿಡುಗಡೆ ಮಾಡಿದ ಅನುದಾನ**
2017-18	ಪ್ರತಿ ತಾಲ್ಲೂಕಿಗೆ ರೂ.10.00 ಲಕ್ಷ
2018-19	ಪ್ರತಿ ತಾಲ್ಲೂಕಿಗೆ ರೂ.10.00 ಲಕ್ಷ
2019-20	ಪ್ರತಿ ತಾಲ್ಲೂಕಿಗೆ ರೂ.5.00 ಲಕ್ಷ
2020-21	ಪ್ರತಿ ತಾಲ್ಲೂಕಿಗೆ ರೂ.5.00 ಲಕ್ಷ

2021-22ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು ಆಧರಿಸಿ ಸಾಲಿಗ್ರಾಮ ತಾಲ್ಲೂಕು ಸೇರಿದಂತೆ ಹೊಸ ತಾಲ್ಲೂಕುಗಳಿಗೆ ಅನುದಾನ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉಳಿದಂತೆ ವಿವಿಧ ಯೋಜನೆಗಳಡಿ ಆಯವ್ಯಯದಲ್ಲಿ ಹಂಚಿಕೆ ಮಾಡುವ ಅನುದಾನವನ್ನು ಆಧರಿಸಿ ಆಯಾ ಇಲಾಖೆ ವತಿಯಿಂದ ಅನುದಾನ ಬಿಡುಗಡೆ/ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಇ)	ಈ ನೂತನ ತಾಲ್ಲೂಕು ಕಛೇರಿ ಕಟ್ಟಡಗಳ ಅಂದರೆ ಮಿನಿ ವಿಧಾನ ಸೌಧಗಳ ನಿರ್ಮಾಣಕ್ಕೆ ನಿವೇಶನಗಳನ್ನು ಗುರುತಿಸಲಾಗಿದೆಯೇ; ಹೌದಾದಲ್ಲಿ ಅಗತ್ಯವಾದ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆಯೇ; ನೂತನ ತಾಲ್ಲೂಕು ಕಛೇರಿ ಸಂಕೀರ್ಣದ ಕಟ್ಟಡಗಳ ನಿರ್ಮಾಣ ಯಾವ ಯಾವ ನೂತನ ತಾಲ್ಲೂಕು ಕೇಂದ್ರಗಳಲ್ಲಿ ಆರಂಭವಾಗಿದೆ; ಯಾವಾಗ ಮುಕ್ತಾಯವಾಗುತ್ತದೆ;	ಹನೂರು ತಾಲ್ಲೂಕಿನ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಹನೂರು ಹೋಬಳಿ, ಹುಲ್ಲೇಪುರ ಸರ್ವೆ ನಂ.312/ಡಿ ರಲ್ಲಿ 7.76 ಎಕರೆ, 312/ಇ ರಲ್ಲಿ 1.17 ಎಕರೆ ಜಮೀನನ್ನು ಕಾಯ್ದಿರಿಸಲಾಗಿದೆ. ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಸಲಹಾ ಮತ್ತು ಅಂದಾಜು ಪಟ್ಟಿ ಪರಿಶೀಲನಾ ಸಮಿತಿ ಅನುಮೋದನೆಗೆ ಪ್ರಸ್ತಾವನೆ ಬಾಕಿ ಇರುತ್ತದೆ. ಸರಗೂರು ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಬಿಡಗಲು ಗ್ರಾಮದ ಸರ್ವೆ ನಂ.3/2 ರಲ್ಲಿ 1.05 ಎಕರೆ ಹಾಗೂ ಸರ್ವೆ ನಂ.3/3 ರಲ್ಲಿ 1.21 ಎಕರೆ ಜಮೀನನ್ನು ಗುರುತಿಸಲಾಗಿದೆ. ಇತ್ತೀಚೆಗೆ ರಚನೆಯಾಗಿರುವ ಸಾಲಿಗ್ರಾಮ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ಕಟ್ಟಡಕ್ಕೆ ಸ್ಥಳ ಗುರುತಿಸುವ ಕಾರ್ಯ ಚಾಲನೆಯಲ್ಲಿದೆ. ಈ ನೂತನ ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧ ನಿರ್ಮಾಣಕ್ಕೆ ಸರ್ಕಾರಿ ಜಮೀನು ಗುರುತಿಸಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
ಈ)	ಈ ಎರಡೂ ಜಿಲ್ಲೆಗಳಲ್ಲಿ ಇರುವ ಉಪವಿಭಾಗಗಳ ಸಂಖ್ಯೆ ಎಷ್ಟು; ನೂತನ ತಾಲ್ಲೂಕುಗಳ ರಚನೆಗೆ ತಕ್ಕಂತೆ ನೂತನ ಉಪ ವಿಭಾಗಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?	ಮೈಸೂರು ಜಿಲ್ಲೆಯಲ್ಲಿ, ಮೈಸೂರು ಹಾಗೂ ಹುಣಸೂರು ಉಪ ವಿಭಾಗಗಳು ಹಾಗೂ ಚಾಮರಾಜನಗರದಲ್ಲಿ ಕೊಳ್ಳೇಗಾಲ ಉಪ ವಿಭಾಗವಿರುತ್ತದೆ. ಈ ಜಿಲ್ಲೆಗಳಲ್ಲಿ ಹೊಸ ಉಪ ವಿಭಾಗಾಧಿಕಾರಿ ಕಚೇರಿಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಸಂಖ್ಯೆ: ಕಂಇ 85 ಎಲ್ಆರ್‌ಡಿ 2021

(ಆರ್.ಅಶೋಕ)
ಕಂದಾಯ ಸಚಿವರು